# ಫೆಬ್ರವರಿ, 2016 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

- ತಾಳೆ ಗಿಡಗಳಿಗೆ ಪ್ರತಿ 3 ತಿಂಗಳಿಗೊಮ್ಮೆ ಗೊಬ್ಬರಗಳನ್ನು ನೀರಾವರಿ ಪ್ರದೇಶಗಳಲ್ಲಿ ನೀಡಬೇಕು.
- ರಾಸಾಯನಿಕ ಗೊಬ್ಬರಗಳನ್ನು ತಾಳೆ ಮರದ ಕಾಂಡದಿಂದ ೫೦ ಸೆಂ ಮೀ ದೂರದಲ್ಲಿ ಕಳೆ ನಿರತ ಪಾತಿಯಲ್ಲಿ ಹರಡುವುದು ಮತ್ತು ಮಣ್ಣಿನ ಮೇಲ್ಪದರದೊಂದಿಗೆ ಬೆರೆಸಿ ಪಾತಿಯಲ್ಲಿ ನೀರುಣಿಸುವುದು.
- ಆಗ ತಾನೆ ನಾಟಿ ಮಾಡಿದ ತಾಳೆ ಸಸಿಗಳಿಗೆ ಮೊದಲ ಕಂತಿನ ರಸಗೊಬ್ಬರವನ್ನು ೩ ತಿಂಗಳ ನಂತರ ನೀಡುವುದು. ೫೦ ರಿಂದ ೧೦೦ ಕೆ ಜಿ ಕೊಟ್ಟಿಗೆ ಗೊಬ್ಬರ ಅಥವಾ ೧೦೦ ಕೆ ಜಿ ಹಸಿರೆಲೆ ಗೊಬ್ಬರ ಪ್ರತಿ ತಾಳೆ ಮರಕ್ಕೆ ಎರಡನೇ ಕಂತಿನ ರಸಗೊಬ್ಬರ ನೀಡುವ ಸಂಧರ್ಬದಲ್ಲಿ ನೀಡುವುದು. ಪ್ರತಿ ತಾಳೆ ಮರಕ್ಕೆ ಪ್ರತಿ ವರ್ಷಕ್ಕೆ ೫ ಕೆ ಜಿ ಬೇವಿನ ಹಿಂಡಿ ಗೊಬ್ಬರವನ್ನು ನೀಡುವುದು ಉತ್ತಮ.
- ಉತ್ಪತಿಯಾಗುವ ಹೂ ಗೊಂಕಾಲುಗಳನ್ನು ನಾಟಿ ಮಾಡಿದ ಮೊದಲ, ಎರಡು ಮತ್ತು ಮೂರನೇ ವರ್ಷಗಳಲ್ಲಿ ತೆಗೆಯಬೇಕು. ಈ ಕ್ರಿಯೆಯಿಂದ ಗಿಡದ ಕಾಂಡವು ಗಟ್ಟಿಯಾಗಿ ಬೆಲೆಯುವುದರೊಂದಿಗೆ ಬೇರುಗಳು ಬಲವಾಗಿ ಬೆಳೆಯುತ್ತವೆ.
- ತಾಳೆ ಸಸಿಗಳನ್ನು ನೆಡುವಾಗ 1 ರಿಂದ 1.3 ಮೀಟರ್ ಎತ್ತರದ 12 ರಿಂದ 14 ತಿಂಗಳ ವಯಸ್ಸಿನ 13 ಗರಿಗಳಿರುವ ಉತ್ತಮ ತಾಳೆ ಸಸಿಗಳನ್ನು ಆಯ್ಕೆ ಮಾಡಬೇಕು.